**ಸಾಕ್ಷಿಯನ್ನು ದಿಃ09.10.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನನಗೆ ಈಗ 65 ವರ್ಷ.

2. ಕಾಳೇಗೌಡರ ದತ್ತು ಮಗ ನಂಜೇಗೌಡ ಎಂದರೆ ಯಾರು ಎಂದರೆ ಯಾರು ಎಂದರೆ, ನನಗೆ ಗೊತ್ತಿಲ್ಲ. ನನ್ನ ತಂದೆ ಹೆಸರು ನಂಜೇಗೌಡ. ನನ್ನ ತಾತನ ಹೆಸರು ಕಾಳೇಗೌಡ. ನಿಮ್ಮ ತಂದೆಯ ಜನಕ ತಂದೆ ಯಾರು ಎಂದರೆ ನನಗೆ ಗೊತ್ತಿಲ್ಲ.

3. ಕಾಳೇಗೌಡರಿಗೆ ನಿಮ್ಮ ತಂದೆ ದತ್ತು ಮಗ ಎಂದರೆ, ಇರಬಹುದು ನನಗೆ ಗೊತ್ತಿಲ್ಲ.

4. ದಾವಾ ಆಸ್ತಿಗಳು ಕಾಳೇಗೌಡರ ಆಸ್ತಿ ಎಂದರೆ, ಇಲ್ಲ ನಮ್ಮ ತಂದೆಯ ಆಸ್ತಿ ಎಂದು ನುಡಿಯತ್ತಾರೆ. ಕಾಳೇಗೌಡರಿಂದ ನಿಮ್ಮ ತಂದೆಗೆ ಬಂದಿವೆ ಎಂದರೆ ಸರಿ.

5. ದಿಃ 17.09.1974 ರಂದು ನಿಮ್ಮ ತಂದೆ ನಂಜೇಗೌಡರು ಸಿ.ಎಂ.ಸಣ್ಣಕಾಳೇಗೌಡರಿಗೆ ಸ.ನಂ.45/11 ರಲ್ಲಿ 1 ಎಕರೆ 4 ಗುಂಟೆಯನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆದರೆ ಸದರಿ ಸರ್ವೇ ನಂಬರ್ ತಪ್ಪಾಗಿ 45/8 ಮತ್ತು 45/12 ಕ್ಕೆ ಸಂಬಂಧಪಟ್ಟ ಚಕ್ಕುಬಂದಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 45/11 ರಲ್ಲಿ 32 ಗುಂಟೆಯಲ್ಲಿ ಕಾಳೇಗೌಡರು ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ.

6. ದಿಃ 04.04.1963 ರಲ್ಲಿ ಸ.ನಂ.45/11 ರಲ್ಲಿ 32 ಗುಂಟೆಯನ್ನು ನಿಮ್ಮ ತಂದೆ ಬೋಗಿಗೌಡರ ಮಕ್ಕಳಾದ ಕೃಷ್ಣೇಗೌಡ ಹಾಗೂ ಅಣ್ಣೇಗೌಡರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1963 ರಲ್ಲಿ ನನಗೆ ಸುಮಾರು 14 ವರ್ಷ ಇರಬಹುದು.

7. ಪ್ರತಿವಾದಿಗಳ ಜಮೀನು ಲಪಟಾಯಿಸಲು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

8. ದಿಃ 15.04.1966 ರಲ್ಲಿ ನಿಮ್ಮ ತಂದೆ ಸಣ್ಣಕಾಳೇಗೌಡ ಬಿನ್ ಮರಿಗೌಡರವರಿಗೆ ಸ.ನಂ.49/1 ರಲ್ಲಿ 1 ಎಕರೆ 22 ಗುಂಟೆ ಮಾರಾಟ ಮಾಡಿದ್ದಾರೆ ಎಂದರೆ, ಸ.ನಂ.49/1-2 ನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.

9. ಸ.ನಂ.45/8 ಹಾಗೂ 45/12 ರ ಬದಲಾಗಿ ಕ್ರಯಪತ್ರದಲ್ಲಿ ಸ.ನಂ.45/11 ಎಂದು ತಪ್ಪಾದ ಬಗ್ಗೆ ತಿದ್ದುಪಡಿಗೆ ದಾವೆ ಹಾಕಿದ್ದೇವೆ ಎಂದರೆ ಸರಿ.

10. ಸ.ನಂ.49/2 ಎ ರಲ್ಲಿ 1 ಎಕರೆ 14 ಗುಂಟೆ ನನ್ನ ತಂದೆಯಿಂದ ನನಗೆ ಖಾತೆ ಆಗಿದೆ.

11. ಸ.ನಂ.45/8 ಹಾಗೂ 45/12 ನಿಮ್ಮ ಪತ್ನಿಯ ಹೆಸರಿಗೆ ವ್ಯವಸ್ಥಾಪತ್ರವನ್ನು ಬರೆದಿದ್ದೀರಾ ಎಂದರೆ, ಸರಿ.

12. ಸ.ನಂ.45/8 ಹಾಗೂ 45/12 ರ ಪಹಣಿ ಈಗ ನಿಮ್ಮ ಹೆಸರಿಗೆ ಇಲ್ಲ ಎಂದರೆ, ಸರಿ.

13. ಸ.ನಂ.45/8, 45/12 ನ್ನು ಎರಡು ಕ್ರಯಪತ್ರದಡಿ ಮಾರಾಟ ಮಾಡಿದ್ದರೂ, ಪಹಣಿಯಲ್ಲಿ ಉಳಿದುಕೊಂಡ ಕಾರಣ ಈ ಸುಳ್ಳು ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

14. ಸ.ನಂ.45/8 ರ ಚಕ್ಕುಬಂದಿ ಪೂರ್ವಕ್ಕಃ ಸಣ್ಣಕಾಳೇಗೌಡರು, ಪಶ್ಚಿಮಕ್ಕೆಃ ನಾಗಮ್ಮ, ಉತ್ತರಕ್ಕೆಃ ಗಂಡೆ ಕಾಳೆಗೌಡ ಹಾಗೂ ಹನುಮೇಗೌಡ ದಕ್ಷಿಣಕ್ಕೆಃ ನನ್ನ ಸ.ನಂ.45/12 ರ ಜಮೀನು. ಸದರಿ ಚಕ್ಕುಬಂದಿ ಸುಳ್ಳು ಎಂದರೆ ಸರಿಯಲ್ಲ.

15. ಸ.ನಂ.45/12 ರ ದಕ್ಷಿಣಕ್ಕೆ 45/8 ರ ಜಮೀನು ಇದೆ.

16. ಸ.ನಂ.45/8, 45/12 ಹಾಗೂ 49/2 ರ ಜಮೀನುಗಳಲ್ಲಿ ನಾನು ವ್ಯವಸಾಯ ಮಾಡಿದ್ದನ್ನು ನೋಡಿದವರು ಯರಾದರೂ ಇದ್ದಾರಾ ಎಂದರೆ, ನಮ್ಮ ಸುತ್ತಮುತ್ತಲಿನವರು ನೋಡಿದ್ದಾರೆ. ಅವರು ರಾಮೇಗೌಡ ಬಿನ್ ಮೊಗಣ್ಣೇಗೌಡ, ಕಾಳೇಗೌಡ, ಪ್ರಸನ್ನ ಹಾಗೂ ಕೃಷ್ಣ ಬಿನ್ ಹುಚ್ಚೇಗೌಡ ಇದ್ದಾರೆ.

17. ನೀವು ದಾವಾ ಜಮೀನು ನೋಡಿಲ್ಲ ಹಾಗೂ ವ್ಯವಸಾಯ ಮಾಡಿಲ್ಲ ಎಂದರೆ ಸರಿಯಲ್ಲ.

18. ನೀವು ಸುಳ್ಳು ಚಕ್ಕುಬಂದಿ ನೀಡಿ ಸುಳ್ಳು ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ. ನಾನು ಈಗ ಭಾರತಿನಗರದಲ್ಲಿ ವಾಸವಿದ್ದೇನೆ.

19. ನಿಮ್ಮ ತಂದೆ ಕ್ರಯಪತ್ರ ಬರೆದುಕೊಟ್ಟಿದ್ದರಿಂದ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ